## ಕವಿತೆ






ಲಲಿತಾ ಸಿದ್ಧಬಸವಯ್ಯ

ಕಲೆ: ರೂಪಶ್ರೀ ಕಲ್ಲಿಗನೂರು


# ಯಾವತ್ತಿನಂತೆ ಒಂದು ದಿನ

ಅವಳು
ದಿನಾಲು ಡಬ್ಬಗಳನ್ನು ಪರೀಕ್ಷಿಸುತ್ತಾಳೆ
ಬೇಳೆ ಇನ್ನೆಷ್ಟು ದಿನ ಬರಬಹುದು
ಹಿಟ್ಟುಗಳು ಯಾವ್ಯಾವು ಎಷ್ಟಿವೆ
ಎಣ್ಣೆ ಇವತ್ತು ನಾಳೆಗೆ ಆದೀತೋ
ಧನಿಯ ಜೀರಿಗೆ ಟೀಪುಡಿ ಸಕ್ಕರೆ...

ಅಡುಗೆಕಟ್ಟೆಯನು ತೊಳೆವ ನೆಪದಲ್ಲಿ
ಸದ್ದಾಗದಂತೆ ಮುಚ್ಚಳ ತೆಗೆದು ಅಳೆದು
ಸೀಳುಬಿಟ್ಟಿಹ ಹಳೇ ಡಬ್ಬಗಳ ಎತ್ತಿಡುತ್ತಾಳೆ
ಅದೇ ಜಾಗಕ್ಕೆ; ತುಸುವೂ ಅನುಮಾನ
ಬರದಂತೆ ಅತ್ತೆಗೆ, ಎಚ್ಚರಾಗದಂತೆ ಮಾವನಿಗೆ

ನೋಯುತ್ತದೆ ಮುದುಕಿ ಒಳಗೊಳಗೆ
ಸೊಸೆಯನ್ನು ದುಡಿಸಿ ತಿಂಬುವ ನಾಚುಗೆ
ಹಿಂಡುತ್ತದೆ ಅದರ ಜೀವವನ್ನು ಸದ್ದಿಲ್ಲದೆ
ಆರೈಸಿದ ಮಗ ಹೋದ, ಹೋಗಲಿಲ್ಲ ಸೊಸೆ
ಇದ್ದಾಳೆ ಮಂಜುಗಣ್ಣಿನ ಮಾವ ನಡುಬಾಗಿದ
ಅತ್ತೆಯ ಜೊತೆಯಲ್ಲೆ ಅದೇ ಮನೆಯಲ್ಲೆ

ಮುದುಕ ಮುದುಕಿ ಏನೇನೋ ಪ್ಲಾನು
ಮಾಡುತ್ತಾರೆ ಸೊಸೆ ಅತ್ತ ಹೋದ ಮೇಲೆ
ಸುಲಭವಾಗಿ ಹೇಗೆ ಸಾಯುವುದು? ವಿಷ
ಹಗ್ಗ ನೀರು ಬೆಂಕಿ ಇತ್ಯಾದಿಗಳ ಮಾತು
ಬಂದು ಹೋಗುತ್ತವೆ ಅವರ ನಡುವೆ
ಒಮ್ಮತವು ಬರದೆ ನಿಲ್ಲುತ್ತದೆ ಇದ್ದಕಡೆಯೆ